ಈ ದಿನ ದಿನಾಂಕಃ 27-03-2024 ರಂದು ಸಾಕ್ಷಿಯನ್ನು ಇಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

<u>ಪಾಟೀಸವಾಲು ಪ್ರತಿವಾದಿ ಪರ ಶ್ರೀ ವೈ ಎಂ ಆರ್ ವಕೀಲರಿಂದಃ</u>

ದಾವೆಯನ್ನು ಬಸವರಾಜಪ್ಪನವರ ಮೇಲೆ ದಾಖಲಿಸಿದ್ದೇನೆ. ದಾವೆಯನ್ನು ಸರ್ವೆ ನಂ. 94 ರ ಆಸ್ತಿಗೆ ಕುರಿತು ಸಲ್ಲಿಸಲಾಗಿರುತ್ತದೆ. ಸರ್ವೆ ನಂ. 94/1 ರ 4 ಎಕರೆ 30 ಗುಂಟೆ ಪೈಕಿ 2 ಎಕರೆ 37 ಗುಂಟೆ ಜಮೀನನ್ನು ಪ್ರತಿವಾದಿ ಕಡೆಯಿಂದ ಸ್ವಾದೀನ ಪಡೆದುಕೊಳ್ಳಲು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಸರ್ವೆ ನಂ. 94/1 ರ ಮೂಲತಃ ಬಸವರಾಜಪ್ಪನವರ ಆಸ್ತಿಯಾಗಿದೆ. ಸರ್ವೆ ನಂ. 94 ರ ಒಟ್ಟು ಕ್ಷೇತ್ರ ನನಗೆ ಗೊತ್ತಿಲ್ಲ. ಸರ್ವೆ ನಂ. 94 ರಲ್ಲಿ 11 ಎಕರೆ 34 ಗುಂಟೆ ಜಮೀನಿದೆ ಎಂದರೆ ನನಗೆ ಗೊತ್ತಿಲ್ಲ.

2. ಸರ್ವೆ ನಂ. 94 ರ ಪೂರ್ವ ಬಾಗದ 4 ಎಕರೆ 30 ಗುಂಟೆ ಜಮೀನನ್ನು ರೇವಣಸಿದ್ದಪ್ಪ ಖರೀದಿಸಿದ ವಿಚಾರ ನನಗೆ ಗೊತ್ತಿಲ್ಲ ಆದರೆ ಆತ ಬಸವರಾಜಪ್ಪನವರ ತಂದೆ. ಸದರಿಯವರು ದಿಃ 14.08.1967 ರಲ್ಲಿ 1,000/- ರೂಗಳಿಗೆ ನೊಂದಾಯಿತ ಕ್ರಯ ಪತ್ರದ ಮೂಲಕ ಮಲ್ಲಪ್ಪ ಹನುಮಪ್ಪನವರಿಂದ ಖರೀದಿಸಿದ್ದಾರೆಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಯ ತಕರಾರಿನ ಬಗ್ಗೆ ಗೊತ್ತಿಲ್ಲ ಮತ್ತು ವಕೀಲರ ಮೂಲಕ ಕೇಳಿ ತಿಳಿದುಕೊಂಡಿಲ್ಲ.

3. ಸೌಬಾಗ್ಯಮ್ಮ ಕೋಂ ರುದ್ರಮುನಿಯಪ್ಪ ಯಾರೆಂದು ಗೊತ್ತಿಲ್ಲ. ದಿಃ 19.02.1973 ರಲ್ಲಿ ಉತ್ತರ ಬಾಗದ 2 ಎಕರೆ ಜಮೀನನ್ನು ಸೌಬಾಗಮ್ಮನವರು ಖರೀದಿಸಿದ್ದಾರೆಂದರೆ ಸರಿಯಲ್ಲ. ಪಾರ್ವತಮ್ಮ ನನ್ನ ಅತ್ತೆ. ಸೌಬಾಗ್ಯಮ್ಮ ನನ್ನ ಅತ್ತೆಯ ಮಗಳು. ಮಂಜಪ್ಪ ನನ್ನ ಗಂಡ. ಆತ ಪಾರ್ವತಮ್ಮನವರ ಮಗ. ಸೌಬಾಗ್ಯಮ್ಮನವರಇ ಕ್ರಯಪತ್ರ ಹಾಗೂ ಇತರೆ ದಾಖಲೆಗಳನ್ನು ನಾನು ನೋಡಿಲ್ಲ.

4. ದಿಃ 14.08.1967 ರಲ್ಲಿ ಬಸಪ್ಪ ಮೈನರ್ ಗಾರ್ಡಿಯನ್ ಬಿನ್ ರೇವಣಸಿದ್ದಪ್ಪ ನವರು ನೊಂದಾಯಿತ ಕ್ರಯಪತ್ರದ ಮೂಲಕ 4 ಎಕರೆ 37 ಗುಂಟೆ ಜಮೀನನ್ನು ಖರೀದಿ ವಿಚಾರ ಗೊತ್ತಿದೆ. ಆ

ಜಮೀನಿನ ಚೆಕ್ಕುಬಂದಿ ನನಗೆ ಗೊತ್ತಿಲ್ಲ. 1967 ರಲ್ಲಿ ಕ್ರಯಕ್ಕೆ ಪಡೆದ 4 ಎಕರೆ 37 ಗುಂಟೆ ಪೂರ್ವಕ್ಕೆ ರೇವಣಸಿದ್ದಪ್ಪನವರ ಜಮೀನು ಎಂದರೆ ಸರಿಯಲ್ಲ, ಪಶ್ಚಿಮಕ್ಕೆ ಆಲೂರು ಹನುಮಂತಪ್ಪನವರ ಜಮೀನು ಎಂದರೆ ಸರಿ, ಉತ್ತರಕ್ಕೆ ಶಿವರುದ್ರಮ್ಮನವರ ಜಮೀನು ಎಂದರೆ ಸರಿ ಮತ್ತು ದಕ್ಷಿಣಕ್ಕೆ ಚೆಲುವಾದಿ ಮೈಲಪ್ಪನವರ ಹೊಲ ಮತ್ತು ಸಂಗಹೊಳ್ಳಪ್ಪನವರ ಹೊಲ ಎಂದರೆ ಸರಿ.

ಮುಂದುವರೆದ ಪಾಟೀಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದರಿಂದ ಮುಂದುವರೆದ ಪಾಟೀಸವಾಲಿಗೆ ಕಾಲಾವಕಾಶ ನೀಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಪಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ. ಚನ್ನಗಿರಿ.